ಅಂದಾಜು ಇದರಲ್ಲಿರುವಂತೆ 3941.90 ಲಕ್ಷ ಇದರಲ್ಲಿ ಯಾವುದು ನಿರ್ಧಾರವಾಗಿ ಇರುವುದು ? ಇದರ ಜೊತೆಗೆ ಎರಡನೇ ಸ್ಟೇಜ್ ಹಾಗೂ ಮೂರನೇ ಸ್ಟೇಜು ಬಗ್ಗೆ ವಿವರಗಳು 10ನೇ ಪ್ಲೇಜಿನಲ್ಲಿರುವಂತೆ ಸುಮಾರು 30 ಕೋಟಿಯವರೆಗೆ ಆಗುತ್ತದೆ ಎಂದರೆ ಇದರ ಒಟ್ಟು ಅಂದಾಜು ಸುಮಾರು 76 ಕೋಟಿಯವರೆಗೆ ಹೋಗುತ್ತದೆ. ಹೀಗಾದರೆ ಇದನ್ನು ಎಷ್ಟು ವರ್ಷದಲ್ಲಿ ಮುಗಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

† ಶ್ರೀ ವೀರೇಂದ್ರ ಪಾಟೀಲ್.—ಸರಕಾರ ಮಾಡುತ್ತಿರುವುದು ಕೇವಲ ಎರಡನೇ ಸ್ಟೇಜಿನ ಘಟಪ್ರಭಾ ಪ್ರಾಜೆಕ್ಟ್. ಇದರಲ್ಲಿ ಹಿಡಕಲ್ ಬಳಿ ಡ್ಯಾಂ ಕಟ್ಟುವ ಕೆಲಸ ಮತ್ತು ನಾಲೆ ತೆಗೆಯುವುದು ಮತ್ತು ರಿಸರ್ವಾಯರ್ ಕೆಲಸಗಳು ನಡೆಯುತ್ತಿವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೂರನೇ ಸ್ಟೇಜಿಗೆ ಇನ್ನೂ ಕೇಂದ್ರ ಸರಕಾರದ ಒಪ್ಪಿಗೆ ದೊರೆತಿಲ್ಲ. ಮೂರನೇ ಸ್ಟೇಜಿನ ಯೋಜನೆ ತಯಾರು ಮಾಡುವ ಯೋಚನೆ ಇದೆಯೇ ? ಮತ್ತು ಇದನ್ನು ಯಾವಾಗ ತೆಗೆದುಕೊಂಡು ಎಷ್ಟು ವರ್ಷಗಳಲ್ಲಿ ಮುಗಿಸಬೇಕೆಂದು ಇದ್ದೀರಿ ಮತ್ತು ಕೇಂದ್ರ ಸರಕಾರದವರ ಒಪ್ಪಿಗೆಯನ್ನು ಪಡೆಯಲು ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮೂರನೇ ಸ್ಟೇಜಿನ ಅಂದಾಜನ್ನು ಕೇಂದ್ರಕ್ಕೇ ಪರಿಶೀಲಿಸಿಕೊಳ್ಳಬೇಕೆಂದು ಸೆಂಟ್ರಲ್ ವಾಟರು ಪವರು ಕಮಿಷನ್‌ಗೆ ಬರೆದಿದ್ದೇವೆ. ಇನ್ನೂ ಅವರಿಂದ ಮಂಜೂರಾತಿ ಬಂದಿಲ್ಲ. ಆದರೆ ಇಲ್ಲಿ ಇರುವುದು ಎರಡನೆ ಸ್ಟೇಜು. ಇದರಲ್ಲಿ ಕೆಲವು ಕೆಲಸಗಳು ಮುಗಿದಿವೆ ಮತ್ತು ರಿಸರ್ವಾಯರು ಕೆಲಸಗಳೂ ಮುಗಿಯುವುದರಲ್ಲಿದೆ. ಸುಮಾರು ಇನ್ನೂ ಎರಡು ಮೂರು ವರ್ಷಗಳಲ್ಲಿ ಆಗಬಹುದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇದರಲ್ಲಿರುವಂತೆ ಮೊದಲ ಸಾರಿ ಇದ್ದ ಅಂದಾಜು 850 ಲಕ್ಷ ಮತ್ತೆ ಇದು ಬದರಾವಣೆಯಾಗಿ ಸುಮಾರು 3500.00 ಲಕ್ಷ ಎಂದು ಇದೆ. ಹೀಗೆ ಜಾಸ್ತಿಯಾಗುತ್ತ ಇರುವುದರಿಂದ ಇನ್ನೂ ಎಷ್ಟು ಜಾಸ್ತಿಯಾಗುತ್ತೆ ಎಂದು ಯೋಚನೆ ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಅನೇಕ ಕಾರಣಗಳಿವೆ. ಜಾಸ್ತಿ ರೇಜುಗಳಾಗುತ್ತವೆ ಮತ್ತು ಇದರ ಸೋಪು ಜಾಸ್ತಿಯಾಗುತ್ತಿದೆ ಮತ್ತು ಇನ್ನೂ ಅನೇಕ ವಿಧವಾದ ಕಷ್ಟಗಳು ಬರುತ್ತವೆ ಮತ್ತು ಇದಕ್ಕೆ ಅನೇಕ ವಿಧವಾದ ಕಾರಣಗಳು ಇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ಹಿಡಕಲ್ ಡ್ಯಾಂ ಪೂರ್ತಿಯಾಗುವುದರೊಳಗಾಗಿ ರೈಟ್ ಬ್ಯಾಂಕ್ ಕೆನಾಲನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ತೆಗೆದುಕೊಳ್ಳುವುದಕ್ಕೆ ಯೋಜನೆ ಹಾಕಿದ್ದೀರಾ ? ಹಾಕಿದ್ದರೆ ರೈಟ್ ಬ್ಯಾಂಕ್ ಕೆನಾಲ್‌ನ ಉದ್ದ ಎಷ್ಟು ಮೈಲಿ ಇರುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ರೈಟ್ ಬ್ಯಾಂಕ್ ಕೆನಾಲ್ ಯೋಜನೆಯನ್ನು ಈಗ ಸಧ್ಯದಲ್ಲಿ ತೆಗೆದುಕೊಳ್ಳುವ ಉದ್ದೇಶ ಇಲ್ಲ. ಅದನ್ನು ಮಂಜೂರಾತಿಗಾಗಿ ಸ್ಯಾಂಕ್ಷನ್ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈ ಕೆಲಸ ಮುಗಿದಮೇಲೆ ಥರ್ಡ್ ಸ್ಟೇಜಿನಲ್ಲಿ ಶುರು ಮಾಡಬೇಕೆಂದು ಒಟ್ಟುಕೊಂಡಿದ್ದೇವೆ. ಈ ರೈಟ್ ಬ್ಯಾಂಕ್ ಕೆನಾಲ್ ಉದ್ದ 123 ಮೈಲಿ. ಅದರ ಕೆಳಗೆ 3 ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಥರ್ಡ್ ಸ್ಟೇಜ್ ಪ್ರಪೋಸಲ್ಸ್‌ನ್ನು ಯಾವಾಗ ಕಳುಹಿಸಿದಿರಿ ? ಅದಕ್ಕೆ ಬೇಕಾಗುವ ಹಣವೆಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ಹಣ ಬೇಕಾಗಬಹುದು ಎನ್ನುವ ಬಗ್ಗೆ ಈಗಾಗಲೇ ಹೇಳಿದ್ದೇನೆ. ಬಹುಶಃ ಥರ್ಡ್ ಸ್ಟೇಜ್‌ಗೆ ಬೇಕಾಗುವ ಹಣ 27–28 ಕೋಟಿ ರೂಪಾಯಿಗಳು.

Sanction of Additional Post of Teachers to Primary Schools in Raichur District

317. Sri K. SANGAN GOWDA (Lingsugur).—

Will the Minister for Education be pleased to state :—

(*a*) the number of additional posts of Teachers sanctioned to the Primary Schools in Raichur District during 1968-69 ;

(SRI K. . SANGAN GOWDA)

(*b*) the amount sanctioned towards non-recurring charges per teacher ;

(*c*) the amount utilised so far for this purpose ?

Sri N. M. KOTRABASIAH SOGI (Deputy Minister for Education).—

(*a*) 64.

(*b*) Rs. 200.

(*c*) Rs. 12,783-20 for 64 teachers, leaving a small balance of Rs. 16·80.

ಶ್ರೀ ಕೆ. ಸಂಗನಗೌಡ.—ಸ್ವಾಮಿ, 64 ಮಂದಿ ಶಿಕ್ಷಕರು ಇದ್ದಾರೆ ಎಂದು ತಿಳಿಸಿದ್ದೀರಿ. ಅದರಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಶಿಕ್ಷಕರು ಇದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿವರ ನನ್ನಲ್ಲಿಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈಗ 64 ಜನ ಉಪಾಧ್ಯಾಯರನ್ನು ಹೆಚ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಈ ರೀತಿ ಅಪಾಯಿಂಟ್ ಮಾಡುವಾಗ ಶಿಕ್ಷಕರು ಮತ್ತು ಉಪಾಧ್ಯಾಯರ ಒಂದು ರೇಷಿಯೋ ತೆಗೆದುಕೊಂಡು ಮಾಡಿದ್ದೀರಾ ? ಶಿಕ್ಷಕರ ರೇಷಿಯೋಮೇರೆಗೆ ಉಪಾಧ್ಯಾಯರನ್ನು ಅಪಾಯಿಂಟ್ ಮಾಡಿದ್ದರೆ 1968-69 ರಲ್ಲಿ ನ್ಯೂಡೆಂಟ್ ಸಂಖ್ಯೆ ಎಷ್ಟು ಇದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಿನ ಹೊಸ ಪದ್ಧತಿ ಪ್ರಕಾರ ಶಿಕ್ಷಕರನ್ನು ಅಪಾಯಿಂಟ್ ಮಾಡುವಾಗ ಹುಡುಗರ ಹಾಜರಾತಿಮೇರೆ ನೇಮಕ ಮಾಡುತ್ತೇವೆ. ಆ ರೇಷಿಯೋ ಪ್ರಕಾರ 30 ಹುಡುಗರಿಗೆ ಒಬ್ಬ ಉಪಾಧ್ಯಾಯರನ್ನು ಸ್ಯಾಂಕ್ಷನ್ ಮಾಡುತ್ತೇವೆ.

ಶ್ರೀ ಕೆ. ಸಂಗನಗೌಡ.—ಸ್ವಾಮಿ, 64 ಉಪಾಧ್ಯಾಯರುಗಳಿಗೆ 12,783-20 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಇದನ್ನು ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ? ಇಂಥಾ ಭಾಗಕ್ಕೆ ಇಷ್ಟು ಖರ್ಚು ಮಾಡಬೇಕು ಎನ್ನುವ ಖಾತ್ರಿ ಮಾಡಿಕೊಂಡಿದ್ದೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಧ್ಯದಲ್ಲಿ ಸ್ಕೂರ್‌ಗಳ ಎಕ್ವಿಪ್‌ಮೆಂಟ್ಸ್ ಮತ್ತು ಇನ್ನು ಇತರ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಕೊಟ್ಟಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—64 ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ರಾಯಚೂರಿಗೆ ಇಷ್ಟೇ ಪೋಸ್ಟ್ ಮಾಡಬೇಕು ಎಂದು ಅಲ್ಲಿಯ ಡಿ.ಇ.ಓ. ಮಾಡಿದರೇ ಅಥವಾ ಸರ್ಕಾರದವರು ಮಾಡಿದರೇ ? ಅಥವಾ ಇನ್ನೂ ಹೆಚ್ಚು ಪೋಸ್ಟ್ ಬೇಕಾಗುತ್ತದೆ, ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇನ್ನೂ ಹೆಚ್ಚು ಬೇಕಾಗಿರಬಹುದು. ನಾವು ಸ್ಯಾಂಕ್ಷನ್ ಮಾಡಬೇಕಾದರೆ ನಮ್ಮ ಹತ್ತಿರ ಇರುವ ವಿಷಯ ಇತರೇ ವಿಷಯಗಳನ್ನೂ ತಿಳಿದುಕೊಂಡು ಮಾಡುತ್ತೇವೆ. ಆ ರೀತಿ ಒಟ್ಟು ರಾಜ್ಯಕ್ಕೆ 687 ಶಿಕ್ಷಕರನ್ನು ಸ್ಯಾಂಕ್ಷನ್ ಮಾಡಿದ್ದೇವೆ. 64 ಜನ ಉಪಾಧ್ಯಾಯರನ್ನು ರಾಯಚೂರು ಜಿಲ್ಲೆಗೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಬೇಕಾದರೆ ಅದನ್ನು ಪರಿಗಣಿಸಲಾಗುತ್ತದೆ.